# ಕರ್ನಾಟಕ ಲೋಕಾಯುಕ್ತ

ನಂ.ಉಪಲೋಕ್-2/ಡಿಇ/815/2017/ಎ.ಆರ್.ಇ-10

ಡಾ:ಬಿ.ಆರ್.ಅಂಬೇಡ್ಕರ್ ವೀದಿ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು-560001,
ದಿನಾಂಕ: 29/10/2021.

## ವಿಚಾರಣಾ ವರದಿ

**ಉಪಸ್ಥಿತರು:** ಜಿ. ನಂಜುಂಡಯ್ಯ,
ಅಪರ ನಿಬಂಧಕರು ವಿಚಾರಣೆಗಳು-10,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

**ವಿಷಯ:** ಆಪಾದಿತ ಸರ್ಕಾರಿ ನೌಕರ ಶ್ರೀ ಎನ್. ರಾಮಚಂದ್ರಯ್ಯ, ನಿವೃತ್ತ ಅಬಕಾರಿ ಉಪ ಆಯುಕ್ತರವರ ವಿರುದ್ಧದ ಇಲಾಖಾ ವಿಚಾರಣೆ ಕುರಿತು.

**ಉಲ್ಲೇಖ:**
1. ಕಂಪ್ಲೆಂಟ್/ಉಪಲೋಕ್/ಬಿಡಿ-8428/2015/ಡಿಆರ್ಇ-1 ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ ದಿನಾಂಕ: 27/03/2017.
2. ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 59 ಇಪಿಎಸ್ 2017, ಬೆಂಗಳೂರು, ದಿನಾಂಕ: 13/06/2017.
3. ನಾಮನಿರ್ದೇಶನ ಸಂಖ್ಯೆ.ಉಪಲೋಕ್-2/ಡಿಇ/815/2017, ಬೆಂಗಳೂರು ದಿನಾಂಕ: 24/06/2017.

* * * *

ಈ ದೂರನ್ನು, ದೂರುದಾರರಾದ ಶ್ರೀ **ವೈ.ಇ. ನವೀನ್‌ಕುಮಾರ್** ಬಿನ್ ಈಶ್ವರರೆಡ್ಡಿ, ಬೇಡರೆಡ್ಡಿಹಳ್ಳಿ ಗ್ರಾಮ, ಚಳ್ಳಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆರವರು ಆಪಾದಿತ ಸರ್ಕಾರಿ ನೌಕರ **ಎನ್.ರಾಮಚಂದ್ರಯ್ಯ,** ಅಬಕಾರಿ ಉಪ ಆಯುಕ್ತರವರ ವಿರುದ್ಧ ದೂರು ಸಲ್ಲಿಸಿ ಆಪಾದಿತ ಸರ್ಕಾರಿ ನೌಕರರು ಮದ್ಯದಂಗಡಿಯಲ್ಲಿ ಮದ್ಯ ಸೇವನೆಗೆ ಅವಕಾಶವಿರದೇ ಇದ್ದರೂ ಸಹ ಅವಕಾಶ ಮಾಡಿಕೊಟ್ಟಿರುತ್ತಾರೆಂದು, ಬಾರ್ ಅಂಡ್ ರೆಸ್ಟೋರೆಂಟ್ ನಡೆಸಲು ಅಬಕಾರಿ ಇಲಾಖೆಯ

ಷರತಯ್ತುಗಳ ಪ್ರಕಾರ ಇಡೀ ಜಿಲ್ಲೆಯಲ್ಲಿ ಯಾವುದೇ ಅಂಗಡಿ ಕಾನೂನು ರೀತಿ ನಡೆಯುತ್ತಿಲ್ಲವೆಂದು ದೂರು ದಾಖಲಿಸಿರುತ್ತಾರೆ.

2. ತನಿಖೆ ಪೂರ್ಣಗೊಂಡ ನಂತರ, ಸರ್ಕಾರಕ್ಕೆ ಕರ್ನಾಟಕ ಲೋಕಾಯುಕ್ತ ಅಧಿನಿಯಮದ ಕಲಂ 12(3)ರಡಿಯಲ್ಲಿ ಉಲ್ಲೇಖ (1)ರಲ್ಲಿ ಕಾಣಿಸಿದಂತೆ, ವರದಿ ಸಲ್ಲಿಸಿದ್ದು, ಸದರಿ ವರದಿಯನ್ವಯ ಕರ್ನಾಟಕ ಸರ್ಕಾರವು ಆದೇಶ ದಿನಾಂಕ: 13/06/2017 ರಂದು, ಮಾನ್ಯ ಉಪಲೋಕಾಯುಕ್ತರವರಿಗೆ ವಿಚಾರಣೆ ಮಾಡಿ ವರದಿ ಸಲ್ಲಿಸುವಂತೆ, ಸರ್ಕಾರಿ ಆದೇಶವನ್ನು ನೀಡಿರುವ ಮೇರೆಗೆ, ಮಾನ್ಯ ಉಪಲೋಕಾಯುಕ್ತರವರು ದಿನಾಂಕ: 24/06/2017 ರಂದು ಅಪರ ನಿಬಂಧಕರು, ವಿಚಾರಣೆಗಳು-10 ರವರಿಗೆ ವಿಚಾರಣೆ ಮಾಡಿ ವರದಿ ಸಲ್ಲಿಸಲು ಆದೇಶಿಸಿರುತ್ತಾರೆ.

3. ನಾಮನಿರ್ದೇಶನದ ಆದೇಶದಂತೆ, ಆ.ಸ.ನೌ ರವರ ವಿರುದ್ಧ ದೋಷಾರೋಪಣೆ (Article of Charge) ಅನ್ನು ರಚಿಸಿದ್ದು, ಸದರಿ ದೋಷಾರೋಪಣೆಯ ಅನುಬಂಧ-1 ಮತ್ತು ಅನುಬಂಧ-2 ರೊಂದಿಗೆ ದುರ್ನಡತೆ ಮತ್ತು ಕರ್ತವ್ಯಲೋಪದ ವಿವರಗಳುಳ್ಳ ಆರೋಪವನ್ನು ಆ.ಸ.ನೌ ರವರಿಗೆ ದಿನಾಂಕ: 30/10/2017 ರಂದು ಈ ಕೆಳಕಂಡಂತೆ ಕಳುಹಿಸಲಾಗಿರುತ್ತದೆ.

***ಅನುಬಂಧ-1***

***ದೋಷಾರೋಪಣೆ-1***

2. ಆ.ಸ.ನೌಕರರಾದ ಶ್ರೀ ರಾಮಚಂದ್ರಯ್ಯ, ಉಪ ಆಯುಕ್ತರು, ಅಬಕಾರಿ ಇಲಾಖೆ, ಚಿತ್ರದುರ್ಗ ಆದ ನೀವು ಈ ಕೆಳಕಂಡ ದುರ್ನಡತೆ ಎಸಗಿರುತ್ತೀರಿ :-

i. ಸಿ.ಎಲ್.-2 ಮದ್ಯದ ಅಂಗಡಿಗಳಲ್ಲಿ ಮದ್ಯ ಸೇವನೆಗೆ ಅವಕಾಶವಿಲ್ಲವಾದರೂ ಕಾನೂನು ಬಾಹಿರವಾಗಿ ಎಲ್ಲಾ ಮದ್ಯದ ಅಂಗಡಿಗಳಲ್ಲಿ ಮದ್ಯ ಸೇವನೆ ಮಾಡುತ್ತಿರುವುದು ಸರ್ವೇ

ಸಾಮಾನ್ಯವಾಗಿರುತ್ತದೆ ಮತ್ತು ಜಿಲ್ಲೆಯ ಅಬಕಾರಿ ಇಲಾಖೆಯ ಅಧಿಕಾರಿಗಳು ಇದನ್ನು ತಡೆಗಟ್ಟಲು ಪರಿಣಾಮಕಾರಿಯಾದ ಕ್ರಮಗಳನ್ನು ತೆಗೆದುಕೊಂಡಿರುವುದು ಕಂಡು ಬಂದಿರುತ್ತದೆ. ಕೇವಲ ಅಂಕಿ ಸಂಖ್ಯೆಗೋಸ್ಕರ ಕೆಲವೊಂದು ಪ್ರಕರಣಗಳನ್ನು ಕರ್ನಾಟಕ ಅಬಕಾರಿ ಕಾಯ್ದೆ 1965 ಕಲಂ 36(ಬಿ) ಪ್ರಕಾರ ದಾಖಲಿಸಿರುತ್ತೀರಿ.

ii ಸಿ.ಎಲ್.-9 ಬಾರ್ ಅಂಡ್ ರೆಸ್ಟೋರೆಂಟ್ ಮದ್ಯದ ಅಂಗಡಿಗಳಲ್ಲಿಯೂ ಸಹ ಕರ್ನಾಟಕ ಅಬಕಾರಿ ಕಾಯ್ದೆ 1965 ರ ನಿಯಮಾನುಸಾರ ನಡೆಸಲು ನಿಗದಿತ ಸಮಯ ಮೀರಿ ಮದ್ಯದ ಅಂಗಡಿಗಳನ್ನು ತೆರೆದು ಮದ್ಯದ ಮಾರಾಟ ಮತ್ತು ಸೇವನೆಗೆ ಅವಕಾಶ ಮಾಡಿಕೊಡುತ್ತಿರುವುದು ಸಹ ಸರ್ವೇಸಾಮಾನ್ಯವಾಗಿರುತ್ತದೆ. ಈ ಬಗ್ಗೆಯೂ ಸಹ ಚಿತ್ರದುರ್ಗ ಜಿಲ್ಲಾ ಅಬಕಾರಿ ಇಲಾಖೆಯ ಅಧಿಕಾರಿಗಳು ಯಾವುದೇ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳದಿರುವುದು ಕಂಡು ಬಂದಿರುತ್ತದೆ. ಕೇವಲ ಅಂಕಿ ಸಂಖ್ಯೆಗೋಸ್ಕರ ಕೆಲವೊಂದು ಪ್ರಕರಣಗಳನ್ನು ಕರ್ನಾಟಕ ಅಬಕಾರಿ ಕಾಯ್ದೆ 1965 ಕಲಂ 15, 15(ಎ), 32(3) ಮತ್ತು 36(ಬಿ) ಪ್ರಕಾರ ದಾಖಲಿಸಿರುತ್ತೀರಿ.

iii ಜಿಲ್ಲೆಯಲ್ಲಿನ ಮದ್ಯದ ಅಂಗಡಿಗಳಲ್ಲಿ ಮದ್ಯದ ಬಾಟಲ್ ಮೇಲಿರುವ ಎಂ.ಆರ್.ಪಿ. ದರಕ್ಕಿಂತ ಹೆಚ್ಚಿಗೆ ದರಕ್ಕೆ ಮಾರಾಟ ಮಾಡುತ್ತಿರುವುದು ಹಾಗೂ ಮದ್ಯದ ಅಂಗಡಿಗಳಲ್ಲಿ ಮಾರಾಟ ಮಾಡುವ ಮದ್ಯಗಳಿಗೆ ಯಾವುದೇ ರಸೀದಿಗಳನ್ನು ನೀಡಿರುವುದಿಲ್ಲ. ಅಲ್ಲದೆ ಪ್ರತಿ ಗ್ರಾಮಗಳಲ್ಲಿಯೂ ಅನಧಿಕೃತವಾಗಿ ಮದ್ಯದ ಮಾರಾಟ ಅವ್ಯಾಹತವಾಗಿ

ನಡೆದಿದ್ದರೂ ಸಹ ಅಬಕಾರಿ ಇಲಾಖೆ ಅಧಿಕಾರಿಗಳು ಯಾವುದೇ ಕಟ್ಟುನಿಟ್ಟಿನ ಕಾನೂನು ಕ್ರಮ ಜರುಗಿಸಿರುವುದಿಲ್ಲ.

ಆದಕಾರಣ ಆಪಾದಿತ ಸರ್ಕಾರಿ ನೌಕರರಾದ ನೀವು ಸರ್ಕಾರಿ ಸೇವಕರಾಗಿದ್ದು, ನಿಮ್ಮ ಕರ್ತವ್ಯಪಾಲನೆಯಲ್ಲಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆಯನ್ನು ತೋರಿಸದೆ ಸ್ವಂತ ಲಾಭಕ್ಕಾಗಿ ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿದ್ದು, ಆಪಾದಿತ ಸರ್ಕಾರಿ ನೌಕರರಾದ ನೀವು ಕರ್ನಾಟಕ ಸರ್ಕಾರಿ ಸೇವಾ (ನಡತೆ) ನಿಯಮಾವಳಿ 1966ರ ನಿಯಮ (3)(1)ನೇ ನಿಬಂಧನೆಯನ್ನು ಉಲ್ಲಂಘಿಸಿ ದುರ್ನಡತೆ ಎಸಗಿದ್ದೀರಿ.

## *ಅನುಬಂಧ-2*

## ದೋಷಾರೋಪಣೆಯ ವಿವರ

(ಸ್ಟೇಟ್‌ಮೆಂಟ್ ಆಫ್ ಇಂಪ್ಯೂಟೇಷನ್ ಆಫ್ ಮಿಸ್‌ಕಾಂಡೆಕ್ಟ್)

3. ದೂರುದಾರರು ತಮ್ಮ ದೂರಿನಲ್ಲಿ ಮದ್ಯದಂಗಡಿಗಳಲ್ಲಿ ಮದ್ಯ ಸೇವನೆಗೆ ಅವಕಾಶವಿರದೇ ಇದ್ದರೂ ಸಹ ಆ.ಸ.ನೌಕರರು ಅವಕಾಶ ಮಾಡಿಕೊಟ್ಟಿರುತ್ತಾರೆಂದು, ಬಾರ್ ಅಂಡ್ ರೆಸ್ಟೋರೆಂಟ್ ನಡೆಸಲು ಅಬಕಾರಿ ಇಲಾಖೆಯ ಷರತ್ತುಗಳ ಪ್ರಕಾರ ಇಡೀ ಜಿಲ್ಲೆಯಲ್ಲಿ ಯಾವುದೇ ಅಂಗಡಿ ಕಾನೂನು ರೀತಿ ನಡೆಯುತ್ತಿಲ್ಲವೆಂದು, ಈ ಸಂಬಂಧ ಆ.ಸ.ನೌಕರರಿಗೆ ಲಿಖಿತ ದೂರು ನೀಡಿದ್ದರೂ ಸಹ ಸದರಿಯವರು ಯಾವುದೇ ಕ್ರಮ ಕೈಗೊಂಡಿರುವುದಿಲ್ಲವೆಂದು, ಜಿಲ್ಲೆಯ ಎಲ್ಲಾ ಮದ್ಯದ ಅಂಗಡಿಗಳಲ್ಲಿ ಸಗಟು/ಚಿಲ್ಲರೆ ದರಕ್ಕಿಂತ ಹೆಚ್ಚಿಗೆ ಮಾರಾಟ ಮಾಡುತ್ತಿದ್ದು, ಈ ಕುರಿತು ಯಾವುದೇ ರಸೀದಿಯನ್ನು ನೀಡುತ್ತಿಲ್ಲವೆಂದು, ಮೊಳಕಾಲ್ಮೂರು ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಕೊಂಡ್ಲಹಳ್ಳಿಯಲ್ಲಿ ನಾಮಫಲಕ ಅಥವಾ ಅಂಗಡಿಯ ಹೆಸರೇ

ಇಲ್ಲದಿರುವ ಬಗ್ಗೆ ಅಬಕಾರಿ ನಿರೀಕ್ಷಕರು ಮೊಳಕಾಲ್ಮೂರು ಇವರನ್ನು ಮೌಖಿಕವಾಗಿ ಮಾಹಿತಿಯನ್ನು ತಿಳಿಸಿದ್ದರೂ ಸಹ ಸದರಿಯವರು ಯಾವುದೇ ಪ್ರತಿಕ್ರಿಯೆ ವ್ಯಕ್ತಪಡಿಸಿರುವುದಿಲ್ಲವೆಂದು ಆ.ಸ.ನೌಕರರು ಈ ಮೇಲ್ಕಂಡ ಎಲ್ಲಾ ಅವ್ಯವಹಾರಗಳಲ್ಲಿ ಮದ್ಯ ಮಾರಾಟಗಾರರೊಂದಿಗೆ ಶಾಮೀಲಾಗಿ ಕರ್ತವ್ಯ ನಿರ್ಲಕ್ಷ್ಯತೆ/ಕರ್ತವ್ಯಲೋಪ ಎಸಗುತ್ತಿದ್ದಾರೆಂದು ಆಪಾದಿಸಿ ದೂರನ್ನು ಸಲ್ಲಿಸಿರುತ್ತಾರೆ.

4. ದೂರುದಾರರ ದೂರಿನ ಬಗ್ಗೆ ತನಿಖೆ ನಡೆಸಿ ವರದಿ ಸಲ್ಲಿಸುವಂತೆ ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಚಿತ್ರದುರ್ಗ ಇವರಿಗೆ ಆದೇಶಿಸಲಾಗಿತ್ತು. ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಚಿತ್ರದುರ್ಗ ಇವರು ವರದಿಯನ್ನು ಸಲ್ಲಿಸಿದ್ದು, ವರದಿಯಲ್ಲಿ

i. ಸಿ.ಎಲ್.–2 ಮದ್ಯದ ಅಂಗಡಿಗಳಲ್ಲಿ ಮದ್ಯ ಸೇವನೆಗೆ ಅವಕಾಶವಿಲ್ಲವಾದರೂ ಕಾನೂನು ಬಾಹಿರವಾಗಿ ಎಲ್ಲಾ ಮದ್ಯದ ಅಂಗಡಿಗಳಲ್ಲಿ ಮದ್ಯ ಸೇವನೆ ಮಾಡುತ್ತಿರುವುದು ಸರ್ವೇಸಾಮಾನ್ಯವಾಗಿರುತ್ತದೆ ಮತ್ತು ಜಿಲ್ಲೆಯ ಅಬಕಾರಿ ಇಲಾಖೆಯ ಅಧಿಕಾರಿಗಳು ಇದನ್ನು ತಡೆಗಟ್ಟಲು ಪರಿಣಾಮಕಾರಿಯಾದ ಕ್ರಮಗಳನ್ನು ತೆಗೆದುಕೊಂಡಿರುವುದು ಕಂಡುಬಂದಿರುತ್ತದೆ. ಕೇವಲ ಅಂಕಿ ಸಂಖ್ಯೆಗೋಸ್ಕರ ಕೆಲವೊಂದು ಪ್ರಕರಣಗಳನ್ನು ಕರ್ನಾಟಕ ಅಬಕಾರಿ ಕಾಯ್ದೆ–1965 ಕಲಂ 36(ಬಿ) ಪ್ರಕಾರ ದಾಖಲಿಸಿರುವುದು ಕಂಡುಬರುತ್ತದೆ.

ii. ಸಿ.ಎಲ್–9 ಬಾರ್ ಅಂಡ್ ರೆಸ್ಟೋರೆಂಟ್ ಮದ್ಯದ ಅಂಗಡಿಗಳಲ್ಲಿಯೂ ಸಹ ಕರ್ನಾಟಕ ಅಬಕಾರಿ ಕಾಯ್ದೆ–1965 ರ ನಿಯಮಾನುಸಾರ ನಡೆಸಲು ನಿಗದಿತ ಸಮಯ ಮೀರಿ ಮದ್ಯದ ಅಂಗಡಿಗಳನ್ನು ತೆರೆದು ಮದ್ಯದ ಮಾರಾಟ ಮತ್ತು ಸೇವನೆಗೆ ಅವಕಾಶ ಮಾಡಿಕೊಡುತ್ತಿರುವುದು ಸಹ ಸರ್ವೇಸಾಮಾನ್ಯವಾಗಿರುತ್ತದೆ. ಈ ಬಗ್ಗೆಯೂ ಸಹ ಚಿತ್ರದುರ್ಗ ಜಿಲ್ಲಾ ಅಬಕಾರಿ ಇಲಾಖೆಯ ಅಧಿಕಾರಿಗಳು ಯಾವುದೇ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳದಿರುವುದು ಕಂಡುಬಂದಿರುತ್ತದೆ. ಕೇವಲ ಅಂಕಿ ಸಂಖ್ಯೆಗೋಸ್ಕರ ಕೆಲವೊಂದು ಪ್ರಕರಣಗಳನ್ನು ಕರ್ನಾಟಕ ಅಬಕಾರಿ ಕಾಯ್ದೆ–1965 ಕಲಂ 15, 15(ಎ), 32(3) ಮತ್ತು 36(ಬಿ) ಪ್ರಕಾರ ದಾಖಲಿಸಿರುವುದು ಕಂಡುಬರುತ್ತದೆ.

iii. ಜಿಲ್ಲೆಯಲ್ಲಿನ ಮದ್ಯದ ಅಂಗಡಿಗಳಲ್ಲಿ ಮದ್ಯದ ಬಾಟಲ್ ಮೇಲಿರುವ ಎಂ.ಆರ್.ಪಿ. ದರಕ್ಕಿಂತ ಹೆಚ್ಚಿಗೆ ದರಕ್ಕೆ ಮಾರಾಟ ಮಾಡುತ್ತಿರುವುದು ಹಾಗೂ ಮದ್ಯದ ಅಂಗಡಿಗಳಲ್ಲಿ ಮಾರಾಟ ಮಾಡುವ ಮದ್ಯಗಳಿಗೆ ಯಾವುದೇ ರಸೀದಿಗಳನ್ನು ನೀಡದಿರುವುದು ಸಹ ಕಂಡುಬಂದಿರುತ್ತದೆ. ಅಲ್ಲದೆ ಪ್ರತಿ ಗ್ರಾಮಗಳಲ್ಲಿಯೂ ಅನಧಿಕೃತವಾಗಿ ಮದ್ಯದ ಮಾರಾಟ ಅವ್ಯಾಹತವಾಗಿ ನಡೆದಿದ್ದರೂ ಸಹ ಅಬಕಾರಿ ಇಲಾಖೆ ಅಧಿಕಾರಿಗಳು ಯಾವುದೇ ಕಟ್ಟುನಿಟ್ಟಿನ ಕಾನೂನು ಕ್ರಮ ಜರುಗಿಸಿರುವುದಿಲ್ಲ ಎಂದು ವಿಚಾರಣಾಧಿಕಾರಿಯವರು ವರದಿಯನ್ನು ಸಲ್ಲಿಸಿರುತ್ತಾರೆಂದು ಹೇಳಿರುತ್ತಾರೆ.

5. ವಿಚಾರಣಾ ವರದಿಯ ಮೇಲೆ ಆಕ್ಷೇಪಣೆಯನ್ನು ಸಲ್ಲಿಸಿದ್ದು, ದೂರಿನಲ್ಲಿರುವ ಆಪಾದನೆ ಹಾಗೂ ವಿಚಾರಣಾಧಿಕಾರಿಯ ವರದಿಯನ್ನು ಅಲ್ಲಗಳೆದಿರುತ್ತಾರೆ. ಕಾನೂನು ಬಾಹಿರವಾಗಿ ಮದ್ಯದಂಗಡಿಗಳಲ್ಲಿ ಬಿಡಿ ಮದ್ಯವನ್ನು ಮಾರಾಟ ಮಾಡುವ ಬಗ್ಗೆ ಮತ್ತು ಮದ್ಯ ಮಾರಾಟ ಮಾಡುವಾಗ ರಸೀದಿಗಳನ್ನು ನೀಡದೇ ಇರುವ ಬಗ್ಗೆ ಮತ್ತು ನಿಗದಿತ ದರಕ್ಕಿಂತ ಹೆಚ್ಚಿನ ಬೆಲೆಗೆ ಮದ್ಯ ಮಾರಾಟ ಮಾಡುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ಅವರ ಇಲಾಖಾ ಅಧಿಕಾರಿಗಳನ್ನು ನೇಮಿಸಿದ್ದು, ಕಾನೂನು ಬಾಹಿರವಾಗಿ ನಿಯಮ ಉಲ್ಲಂಘಿಸಿದವರ ವಿರುದ್ಧ ಹಲವಾರು ಪ್ರಕರಣಗಳನ್ನು ದಾಖಲಿಸಲಾಗಿದೆ ಮತ್ತು ದಂಡವನ್ನು ವಸೂಲಿ ಮಾಡಲಾಗಿದೆ. ಅವರ ಅಧಿಕಾರಾವಧಿಯಲ್ಲಿ ನಿಷ್ಠೆಯಿಂದ ಕರ್ತವ್ಯವನ್ನು ಮಾಡಿರುತ್ತಾರೆಂದು ಹೇಳಿರುತ್ತಾರೆ.

6. ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಚಿತ್ರದುರ್ಗ ಇವರ ವರದಿಯನ್ನು ಪರಿಶೀಲಿಸಿದಾಗ, ಚಿತ್ರದುರ್ಗ ಜಿಲ್ಲೆಯಲ್ಲಿ ಮದ್ಯದ ಅಂಗಡಿ ಮತ್ತು ಬಾರ್ ಅಂಡ್ ರೆಸ್ಟೋರೆಂಟ್‌ಗಳಲ್ಲಿ ನಿಯಮಬಾಹಿರವಾಗಿ ಮದ್ಯ ಮಾರಾಟ ಮಾಡುತ್ತಿರುವುದು ಸರ್ವೇಸಾಮಾನ್ಯವಾಗಿದ್ದು, ಅಬಕಾರಿ ಇಲಾಖೆಯ ಅಧಿಕಾರಿಗಳು ಯಾವುದೇ ಕಟ್ಟುನಿಟ್ಟಿನ ಕ್ರಮವನ್ನು ಕೈಗೊಂಡಿರುವುದಿಲ್ಲವೆಂದು ವರದಿಯಲ್ಲಿ ತಿಳಿಸಿರುವುದಾಗಿದೆ. ಅಲ್ಲದೆ, ಆ.ಸ.ನೌಕರರ ವಿರುದ್ಧ ಚಿತ್ರದುರ್ಗ ಲೋಕಾಯುಕ್ತ ಪೊಲೀಸ್ ಠಾಣೆ ಮೊ.ಸಂ.13/2013 ರ ರೀತ್ಯ ಪ್ರಕರಣ

ದಾಖಲಾಗಿದ್ದು, ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಲಾಗಿರುತ್ತದೆಯೆಂದು ಹೇಳಿರುತ್ತಾರೆ. ಆ.ಸ.ನೌಕರರು ತನ್ನ ಆಕ್ಷೇಪಣೆಯಲ್ಲಿ ಕಾನೂನು ಬಾಹಿರವಾಗಿ ಮದ್ಯ ಮಾರಾಟ ಮಾಡಿದ ಬಗ್ಗೆ ಹಲವಾರು ಪ್ರಕರಣಗಳನ್ನು ದಾಖಲಿಸಲಾಗಿದೆ ಹಾಗೂ ದಂಡವನ್ನು ವಸೂಲಿ ಮಾಡಲಾಗಿದೆಯೆಂದು ಹೇಳಿದ್ದು, ಆದರೆ ಪ್ರಕರಣ ದಾಖಲಾದ ಬಗ್ಗೆ ಮತ್ತು ದಂಡವನ್ನು ವಸೂಲಿ ಮಾಡಿದ ಬಗ್ಗೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ಆದ್ದರಿಂದ, ಆ.ಸ.ನೌಕರರ ಆಕ್ಷೇಪಣೆಯು ತನಿಖಾಧಿಕಾರಿಯ ವರದಿಯನ್ನು ಅಲ್ಲಗಳೆಯಲು ಸಮಂಜಸವಾಗಿರುವುದಿಲ್ಲ. ತನಿಖಾಧಿಕಾರಿಯ ವರದಿಯಲ್ಲಿ ತಿಳಿಸಿರುವ 3 ಅಂಶಗಳು ಮತ್ತು ಆ.ಸ.ನೌಕರರ ವಿರುದ್ಧ ಪ್ರಕರಣ ದಾಖಲಾಗಿ ದೋಷಾರೋಪಣ ಪಟ್ಟಿ ಸಲ್ಲಿಸಿರುವುದನ್ನು ಗಮನಿಸಿದಾಗ, ಮೇಲ್ನೋಟಕ್ಕೆ ಆ.ಸ.ನೌಕರರು ಕರ್ತವ್ಯಲೋಪ ಎಸಗಿರುವುದು ಕಂಡುಬರುತ್ತದೆ. ಆ ಕಾರಣದಿಂದಾಗಿ ಆ.ಸ.ನೌಕರರು ಶಿಸ್ತು ಕ್ರಮಕ್ಕೆ ಭಾದ್ಯಸ್ಥರಾಗಿರುತ್ತಾರೆ.

7. ಆ.ಸ.ನೌಕರರು ಸಾರ್ವಜನಿಕ/ಸರ್ಕಾರಿ ನೌಕರರಾಗಿದ್ದು, ತಮ್ಮ ಕರ್ತವ್ಯ ಪರಿಪಾಲನೆಯಲ್ಲಿ ನಿಷ್ಠೆಯನ್ನು ತೋರದೆ, ಕರ್ತವ್ಯಲೋಪವೆಸಗಿ, ದುರ್ವರ್ತನೆ ತೋರಿಸಿ, ಸಾರ್ವಜನಿಕ/ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡು ಬರುತ್ತಿರುವುದರಿಂದ, ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮ 1966 ರ ನಿಯಮ 3(1)(ii) ಮತ್ತು (iii) ರನ್ವಯ ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆಂದು ಕಂಡು ಬಂದಿದ್ದರಿಂದ, ಆ.ಸ.ನೌಕರರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14–ಎ ರ ಅಡಿಯಲ್ಲಿ, ಆ.ಸ.ನೌಕರರ ವಿರುದ್ಧ ವಿಚಾರಣೆ ನಡೆಸಲು, ಕರ್ನಾಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿ ಇಲಾಖಾ ವಿಚಾರಣೆಯನ್ನು ನಡೆಸಲು ಶಿಸ್ತು ಪ್ರಾಧಿಕಾರಿಯಾದ ಸರ್ಕಾರ ಉಲ್ಲೇಖ (2)ರಡಿ ಕರ್ನಾಟಕ ನಾಗರೀಕ ಸೇವಾ(ನಡತೆ) ನಿಯಮಾವಳಿಗಳು, 1966ರ ನಿಯಮ 3(1)(ii) ಮತ್ತು (iii) ರನ್ವಯ ಶಿಸ್ತುಕ್ರಮಕ್ಕೆ ಬಾಧ್ಯರಾಗಿದ್ದು, ಸದರಿ ಅಧಿಕಾರಿಯು ದಿನಾಂಕ 31.05.2015 ರಂದು ಸರ್ಕಾರಿ

ಸೇವೆಯಿಂದ ವಯೋ ನಿವೃತ್ತಿಯಾಗಿರುವುದರಿಂದಸದರಿಯವರ ವಿರುದ್ಧ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ ನಿಯಮ 214(2)(ಬಿ)(i) ರಂತೆ ವಿಚಾರಣೆ ನಡೆಸಲು ಆದೇಶದಲ್ಲಿ ಗೌರವಾನ್ವಿತ ಉಪಲೋಕಾಯುಕ್ತರವರಿಗೆ ವಹಿಸಿದ್ದು, ಗೌರವಾನ್ವಿತ ಉಪಲೋಕಾಯುಕ್ತರವರು ಅಪರ ನಿಬಂಧಕರು ವಿಚಾರಣೆಗಳು 10 ಇವರನ್ನು ವಿಚಾರಣೆ ನಡೆಸಲು ನೇಮಕ ಮಾಡಿದ್ದಾರೆ. **ಆದ್ದರಿಂದ ನಿಮ್ಮ ವಿರುದ್ಧ ಈ ಆಪಾದನೆ.**

4. ಈ ಮೇಲ್ಕಂಡ ದೋಷಾರೋಪಣೆ (ಆರ್ಟಿಕಲ್ ಆಫ್ ಚಾರ್ಜ್) ಆ.ಸ.ನೌ ರವರಿಗೆ ಕಳುಹಿಸಿದ್ದು, ಅದು ಜಾರಿಯಾದ ನಂತರ ಆ.ಸ.ನೌ ರವರು 20.11.2017 ರಂದು ಹಾಜರಾಗಿದ್ದು, ಅವರ ಪ್ರಥಮ ಮೌಖಿಕ ಹೇಳಿಕೆಯನ್ನು ನಿಯಮ–11(9) ಕೆ.ಸಿ.ಎಸ್. ಸಿಸಿಎ ರೂಲ್ಸ್ 1957ರ ಅಡಿಯಲ್ಲಿ ದಾಖಲಿಸಲಾಗಿರುತ್ತದೆ. ಆ.ಸ.ನೌ ರವರು ತಪ್ಪೊಪ್ಪಿಕೊಳ್ಳದೆ ಆರೋಪಗಳ ವಿಚಾರಣೆಯನ್ನು ಬಯಸಿರುತ್ತಾರೆ.

5. ಆ.ಸ.ನೌ ರವರಿಗೆ ದಾಖಲೆಗಳ ಪರಿಶೀಲನೆ ಮತ್ತು ಶೋಧನೆಗಾಗಿ ಅವಕಾಶ ಕಲ್ಪಿಸಲಾಗಿರುತ್ತದೆ.

6. ಆ.ಸ.ನೌ ರವರು ತಮ್ಮ ಲಿಖಿತ ರಕ್ಷಣಾ ಹೇಳಿಕೆ ದಿನಾಂಕ 09.01.2018 ರಲ್ಲಿ, ದೂರಿನಲ್ಲಿ ಆಪಾದಿಸಿರುವ ಸಂಗತಿಗಳನ್ನು ನಿರಾಕರಿಸಿರುತ್ತಾರೆ. ಮದ್ಯದ ಅಂಗಡಿಗಳಲ್ಲಿ ಮದ್ಯ ಸೇವನೆಗೆ ಅವಕಾಶವಿಲ್ಲದಿದ್ದರೂ ಕೇವಲ ಅಂಕಿ ಸಂಖ್ಯೆಗೋಸ್ಕರ ಕೆಲವೊಂದು ಪ್ರಕರಣಗಳನ್ನು ದಾಖಲಿಸಿರುವ ಸಂಬಂಧ, ಸದರಿ ಆರೋಪವು ತೀವ್ರವಾದ ಅಸ್ಪಷ್ಟತೆಯಿಂದ ಕೂಡಿದ್ದು, ಮದ್ಯದ ಅಂಗಡಿಗಳಲ್ಲಿ ಮದ್ಯ ಸೇವನೆ ಮಾಡುತ್ತಿರುವುದನ್ನು ತಡೆಗಟ್ಟಲು ಪರಿಣಾಮಕಾರಿಯಾದ ಕ್ರಮಗಳನ್ನು ತೆಗೆದುಕೊಂಡಿರುವುದಾಗಿ, ತಾನು ನಿಯಮ ಮೀರಿ ಮದ್ಯದ ಅಂಗಡಿಗಳನ್ನು ತೆರೆದು ಮದ್ಯದ ಮಾರಾಟ ಮತ್ತು ಸೇವನೆಗೆ ಅವಕಾಶ ಮಾಡಿಕೊಟ್ಟಿಲ್ಲವೆಂದು ಇದನ್ನು ತಡೆಗಟ್ಟಲು ಕ್ರಮವಹಿಸಲಾಗಿದೆ

ಹಾಗೂ ಅಬಕಾರಿ ಉಪ ನಿರೀಕ್ಷಕರು, ಅಬಕಾರಿ ಉಪ ಅಧೀಕ್ಷಕರು ರವರ ವ್ಯಾಪ್ತಿಯಲ್ಲಿ ಇದನ್ನು ತಡೆಗಟ್ಟಲು ಕ್ರಮವಹಿಸಬೇಕಾಗಿ, ಅಬಕಾರಿ ಉಪ ಆಯುಕ್ತನಾದ ನಾನು ಕರ್ನಾಟಕ ಅಬಕಾರಿ ಕಾಯ್ದೆ 1965 ರನ್ವಯ ಕರ್ತವ್ಯ ನಿರ್ವಹಿಸಿರುವುದರಿಂದ, ಯಾವುದೇ ಕಟ್ಟುನಿಟ್ಟಿನ ಕಾನೂನುಕ್ರಮ ಜರುಗಿಸಿರುವುದಿಲ್ಲ ಎನ್ನುವ ಅಂಶ ಸಾಬೀತಾಗಿರುವುದಿಲ್ಲವೆಂದು ರಕ್ಷಣಾ ಹೇಳಿಕೆಯನ್ನು ಸಲ್ಲಿಸಿರುತ್ತಾರೆ.

7. ಈ ವಿಚಾರಣೆಯಲ್ಲಿ, ಆ.ಸ.ನೌ ರವರ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಮಂಡನಾಧಿಕಾರಿಗಳು ತಮ್ಮ ಪರವಾಗಿ ದೂರುದಾರರಾದ ಶ್ರೀ ನವೀನ್ ಕುಮಾರ್ ರವರನ್ನು ಪಿ.ಡಬ್ಲ್ಯೂ.1 ಎಂದು ಸಾಕ್ಷ್ಯ ನುಡಿಸಿಕೊಂಡು ನಿ.ಪಿ.–1 ರಿಂದ 8 ರವರೆಗೆ ಹಾಗೂ ಶ್ರೀ ಕೆ. ಸತ್ಯನಾರಾಯಣ, ತನಿಖಾಧಿಕಾರಿಯವರನ್ನು ಪಿ.ಡಬ್ಲ್ಯೂ.2 ಎಂದು ಸಾಕ್ಷ್ಯ ನುಡಿಸಿಕೊಂಡು, ನಿ.ಪಿ. 9 ಮತ್ತು 10 ರವರೆಗಿನ ದಾಖಲೆಗಳನ್ನು ಶಿಸ್ತು ಪ್ರಾಧಿಕಾರದ ಪರವಾಗಿ ಗುರುತಿಸಿಕೊಂಡಿರುತ್ತಾರೆ. ತದನಂತರ, ಆ.ಸ.ನೌ ರವರ ದ್ವಿತೀಯ ಮೌಖಿಕ ಹೇಳಿಕೆಯನ್ನು ದಿನಾಂಕ 20.11.2017 ರಂದು ಪಡೆದುಕೊಳ್ಳಲಾಗಿರುತ್ತದೆ.

8. ಆ.ಸ.ನೌ ಶ್ರೀ **ಎನ್. ರಾಮಚಂದ್ರಯ್ಯ** ರವರು ತಮ್ಮ ಪರವಾಗಿ ತಾವೇ **ಡಿ.ಡಬ್ಲ್ಯೂ.–1** ಎಂದು ಹೇಳಿಕೆ ನೀಡಿ ನಿ.ಡಿ. 1 **ರಿಂದ** ನಿ.ಡಿ. **4** ರವರೆಗೆ ದಾಖಲೆಯನ್ನು ಗುರುತಿಸಿಕೊಂಡಿರುತ್ತಾರೆ.

9. ಉಭಯ ಪಕ್ಷದವರ ಪರವಾಗಿ ವಾದ ವಿವಾದವನ್ನು ಮತ್ತು ಆ.ಸ.ನೌ ರವರ ಪರ ಲಿಖಿತ ವಾದವನ್ನು ಪರಿಶೀಲಿಸಲಾಯಿತು.

10. ಈ ಕೆಳಕಂಡ ಅಂಶವು ನನ್ನ ನಿರ್ಣಯಕ್ಕೆ ಉದ್ಭವಿಸಿರುತ್ತದೆ.

**ಅಂಶ–1:** ವಿಚಾರಣಾ ಪ್ರಾಧಿಕಾರವು ಆ.ಸ.ನೌ ರವರ ಮೇಲೆ ಆಪಾದಿಸಲಾದ ಆರೋಪಗಳನ್ನು ರುಜುವಾತು ಪಡಿಸಿದೆಯೇ?

**ಅಂಶ–2:** ಆದೇಶವೇನು?

11. ವಾದ ವಿವಾದದ ನಂತರ ಕಡತವನ್ನು ಪರಿಶೀಲಿಸಲಾಯಿತು ಮತ್ತು ಲಭ್ಯವಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯವನ್ನು ಪರಿಶೀಲಿಸಲಾಯಿತು.

12. ಮೇಲ್ಕಂಡ ಪ್ರಶ್ನೆಗಳಿಗೆ ಕೆಳಗೆ ಚರ್ಚಿಸಿರುವ ಕಾರಣಗಳಿಂದ ಉತ್ತರವು ಈ ಕೆಳಕಂಡಂತಿದೆ.

**ಅಂಶ 1: ನಕರಾತ್ಮಕವಾಗಿ.**

**ಅಂಶ 2: ಅಂತಿಮ ಆದೇಶದಂತೆ**

**ಕಾರಣಗಳು:**

13. ಈ ವಿಚಾರಣೆಯಲ್ಲಿ, ಆ.ಸ.ನೌ ರವರ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಮಂಡನಾಧಿಕಾರಿಗಳು ತಮ್ಮ ಪರವಾಗಿ ದೂರುದಾರರಾದ ಶ್ರೀ ನವೀನ್ ಕುಮಾರ್ ರವರನ್ನು ಪಿ.ಡಬ್ಲ್ಯೂ.1 ಎಂದು ಸಾಕ್ಷ್ಯ ನುಡಿಸಿಕೊಂಡು ನಿ.ಪಿ.–1 ರಿಂದ 8 ರವರೆಗೆ ಹಾಗೂ ಶ್ರೀ ಕೆ. ಸತ್ಯನಾರಾಯಣ, ತನಿಖಾಧಿಕಾರಿಯವರನ್ನು ಪಿ.ಡಬ್ಲ್ಯೂ.2 ಎಂದು ಸಾಕ್ಷ್ಯ ನುಡಿಸಿಕೊಂಡು, ನಿ.ಪಿ. 9 ಮತ್ತು 10 ರವರೆಗಿನ ದಾಖಲೆಗಳನ್ನು ಶಿಸ್ತು ಪ್ರಾಧಿಕಾರದ ಪರವಾಗಿ ಗುರುತಿಸಿಕೊಂಡಿರುತ್ತಾರೆ. ದೂರುದಾರರು ಸಲ್ಲಿಸಿರುವ ದೂರು ದಿನಾಂಕ 02/05/2015 **ನಿ.ಪಿ–1,** ದೂರಿನ ಪ್ರಪತ್ರ–1 ಮತ್ತು ಪ್ರಪತ್ರ–2 **ನಿ.ಪಿ–2 ಮತ್ತು 3,** ದೂರುದಾರರು ಆಪಾದಿತ ಸರ್ಕಾರಿ ನೌಕರ, ಅಬಕಾರಿ ಜಂಟಿ ಆಯುಕ್ತರು, ಅಬಕಾರಿ ನಿರೀಕ್ಷಕರವರಿಗೆ ಬರೆದಿರುವ ದೂರಿನ ಜೆರಾಕ್ಸ್ ಪ್ರತಿಗಳು **ನಿ.ಪಿ–4,** ದೂರುದಾರರ ಪ್ರತ್ಯುತ್ತರ ದಿನಾಂಕ 22.03.2017 **ನಿ.ಪಿ–5,** ಶ್ರೀ ವೆಂಕಟೇಶ್ವರ ವೈನ್ಸ್ ಮಧ್ಯಮಾರಾಟದಂಗಡಿಯ ಭಾವಚಿತ್ರದ ಜೆರಾಕ್ಸ್ ಪ್ರತಿ **ನಿ.ಪಿ–6. ಸಿಎಲ್‌ಸಿ–2** ಲೈಸನ್ಸ್ ಪ್ರತಿ **ನಿ.ಪಿ–7,** ದೂರುದಾರರ ದೂರಿನ ಪ್ರತಿಗಳು **ನಿ.ಪಿ–8,** ತನಿಖಾಧಿಕಾರಿಯ ವರದಿ ದಿನಾಂಕ 09/12/2015 **ನಿ.ಪಿ–9** ಮತ್ತು ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಚಿತ್ರದುರ್ಗ ರವರು ದಿನಾಂಕ

09/12/2015 ರಂದು ಸದರಿ ತನಿಖಾ ವರದಿಯನ್ನು ಉಪ ನಿಬಂಧಕರು, ವಿಚಾರಣೆಗಳು-5, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರಿಗೆ ಕಳುಹಿಸಿರುವ ಪತ್ರ **ನಿ.ಪಿ-10** ಎಂದು ಗುರುತಿಸಲಾಗಿರುತ್ತದೆ.

14. ಆ.ಸ.ನೌ ಶ್ರೀ ಎನ್. ರಾಮಚಂದ್ರಯ್ಯ, ಉಪ ಆಯುಕ್ತರು, ಅಬಕಾರಿ ಇಲಾಖೆ ರವರು ತಮ್ಮ ಪರವಾಗಿ ತಾವೇ **ಡಿ.ಡಬ್ಲ್ಯೂ.-1** ಎಂದು ನಿ.ಡಿ. **1 ರಿಂದ ನಿ.ಡಿ. 4** ರವರೆಗೆ ದಾಖಲೆಯನ್ನು ಗುರುತಿಸಿಕೊಂಡು ಸಾಕ್ಷ್ಯ ನುಡಿದಿರುತ್ತಾರೆ. **ನಿ.ಡಿ-1** ದೂರಿಗೆ ಆಪಾದಿತ ಸರ್ಕಾರಿ ನೌಕರರು ಸಲ್ಲಿಸಿರುವ ಆಕ್ಷೇಪಣೆ ದಿನಾಂಕ 07/09/2016, **ನಿ.ಡಿ-2** ದಿನಾಂಕ 21.06.2014 ರಿಂದ 30.05.2015 ರ ಅವಧಿಗೆ ದಾಖಲು ಮಾಡಿರುವ ಪ್ರಕರಣಗಳಿಗೆ ಸಂಬಂಧಪಟ್ಟ ಎಫ್‌ಐಆರ್ ಮತ್ತು ಇತ್ಯರ್ಥಪಡಿಸಿದ ಆದೇಶದ ಪ್ರತಿ, ಸರ್ಕಾರಕ್ಕೆ ದಂಡದ ಹಣ ಪಾವತಿ ಮಾಡಿದ ಚಲನ್‌ಗಳು, **ನಿ.ಡಿ-3** ಅಬಕಾರಿ ಅಧಿಕಾರಿಗಳ ಕರ್ತವ್ಯಗಳು ಸರ್ಕಾರದ ಆದೇಶ ಸಂಖ್ಯೆ ಎಫ್‌ಡಿ/42/ಇಪಿಎಸ್/2007(1) ಬೆಂಗಳೂರು ದಿನಾಂಕ 24.03.2018 ರ ಪ್ರತಿ ಮತ್ತು **ನಿ.ಡಿ-4** ಸ್ಪೇಷಲ್ ಕೇಸ್ ನಂ. 2/16 ರ ತೀರ್ಪಿನ ಪ್ರತಿಯಾಗಿರುತ್ತದೆ.

15. ಪಿಡಬ್ಲ್ಯೂ-1 ಶ್ರೀ ನವೀನ್ ಕುಮಾರ್, ದೂರುದಾರರು ತಮ್ಮ ಮುಖ್ಯ ವಿಚಾರಣೆಯಲ್ಲಿ ತನಗೆ ಆಪಾದಿತ ಅಬಕಾರಿ ಉಪ ಆಯುಕ್ತರು ಪರಿಚಯವಿರುವುದಾಗಿ ಸದರಿಯವರು ಚಿತ್ರದುರ್ಗದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ, ಸಿಎಲ್-2 ಲೈಸನ್ಸ್ ಹೊಂದಿರುವ ಮಧ್ಯದಂಗಡಿಯವರು ಮಧ್ಯವನ್ನು ಎಂ.ಆರ್.ಪಿ ದರಕ್ಕಿಂತ 10 ರೂಪಾಯಿ ಹೆಚ್ಚಾಗಿ ಮಾರುತ್ತಿದ್ದು ಮತ್ತು ಮಧ್ಯವನ್ನು ಮಾರಾಟ ಮಾಡಿದ್ದಕ್ಕೆ ರಸೀತಿಯನ್ನು ನೀಡುತ್ತಿರಲಿಲ್ಲವೆಂದು ಹಾಗೂ ಮಧ್ಯ ಸೇವಿಸುವವರಿಗೆ ಅಂಗಡಿಯಲ್ಲೆ ಕುಡಿಯಲು ಅವಕಾಶ ನೀಡುತ್ತಿದ್ದರೆಂದು ಆಪಾದಿಸಿರುವುದಾಗಿ ನುಡಿದಿರುತ್ತಾರೆ. ಮುಂದುವರೆದು, ಸಿ.ಎಲ್.-9 ಲೈಸನ್ಸ್ ಹೊಂದಿರುವ ಮಧ್ಯದಂಗಡಿಯವರು ಹೊರಗೆ ಪಾರ್ಸಲ್ ನೀಡುತ್ತಿದ್ದು ಅಂಗಡಿಯಲ್ಲಿ ಬೆಳಿಗ್ಗೆ 9 ಗಂಟೆಯಿಂದ ರಾತ್ರಿ 11-30ಗಂಟೆಯವರೆಗೆ ಮಧ್ಯ ವ್ಯಾಪಾರ ಮಾಡುತ್ತಿದ್ದು ಊಟವನ್ನು ಸಪ್ಲೈ ಮಾಡದೆ ಅಬಕಾರಿ ಕಾಯ್ದೆಯ ಉಲ್ಲಂಘನೆ ಮಾಡುತ್ತಿರುವುದಾಗಿ ತಿಳಿಸಿ

ಆಪಾದಿತ ಸರ್ಕಾರಿ ನೌಕರರಿಗೆ ಹಾಗೂ ಅಬಕಾರಿ ನಿರೀಕ್ಷಕರಿಗೆ ಮತ್ತು ಗೌರವಾನ್ವಿತ ರಾಜ್ಯಪಾಲರಿಗೆ ದೂರು ಸಲ್ಲಿಸಿದ್ದಾಗಿ ದೂರುದಾರರು ನುಡಿದಿರುತ್ತಾರೆ.

16. ಪಿಡಬ್ಲ್ಯೂ–1 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ, ಈ ಬಗ್ಗೆ ಗೌರವಾನ್ವಿತ ರಾಜ್ಯಪಾಲರು ಅಬಕಾರಿ ಕಮೀಷನರ್ ರವರಿಗೆ ಪತ್ರ ಬರೆದು ಈ ಬಗ್ಗೆ ತನಿಖೆ ಕೈಗೊಂಡು ದೂರುದಾರರಿಗೆ ಹಿಂಬರಹ ನೀಡುವಂತೆ ಸೂಚಿಸಿರುತ್ತಾರೆ. ಆದರೆ, ಆಪಾದಿತ ಸರ್ಕಾರಿ ನೌಕರರು ಹಾಗೂ ಅಬಕಾರಿ ನಿರೀಕ್ಷಕರು ಯಾವುದೇ ಕ್ರಮವನ್ನು ಜರುಗಿಸಿರುವುದಿಲ್ಲವೆಂದು ನುಡಿದಿರುತ್ತಾರೆ. ಆದ್ದರಿಂದ, ತಾನು ದಿನಾಂಕ 02/05/2015 ರಂದು ಲೋಕಾಯುಕ್ತಕ್ಕೆ ನಿ.ಪಿ–1 ರಿಂದ 3 ರಂತೆ ದೂರು ಸಲ್ಲಿಸಿರುವುದಾಗಿ ನುಡಿದಿರುತ್ತಾರೆ. ಮುಂದುವರೆದು, ತಾನು ಆಪಾದಿತ ಸರ್ಕಾರಿ ನೌಕರ, ಅಬಕಾರಿ ಜಂಟಿ ಆಯುಕ್ತರು, ಅಬಕಾರಿ ನಿರೀಕ್ಷಕರವರಿಗೆ ಬರೆದಿರುವ ದೂರಿನ ಜೆರಾಕ್ಸ್ ಪ್ರತಿಗಳು **ನಿ.ಪಿ–4** ಎಂದು ಗುರುತಿಸಲಾಗಿರುತ್ತದೆಂದು ಹಾಗೂ ತಾನು ಆಪಾದಿತ ಸರ್ಕಾರಿ ನೌಕರರು ಸಲ್ಲಿಸಿರುವ ಆಕ್ಷೇಪಣೆಗೆ ನಿ.ಪಿ–5 ರಂತೆ ಪ್ರತ್ಯುತ್ತರವನ್ನು ದಿನಾಂಕ 22.03.2017 ರಂದು ಸಲ್ಲಿಸಿರುವುದಾಗಿ ನುಡಿದಿರುತ್ತಾರೆ.

17. ಪಿಡಬ್ಲ್ಯೂ–1 ರವರ ಮುಂದುವರೆದ ಮುಖ್ಯ ವಿಚಾರಣೆಯಲ್ಲಿ, ಶ್ರೀ ವೆಂಕಟೇಶ್ವರ ವೈನ್ಸ್ ಮದ್ಯ ಮಾರಾಟದಂಗಡಿಯ ಭಾವಚಿತ್ರದ ಜೆರಾಕ್ಸ್ ಪ್ರತಿ **ನಿ.ಪಿ–6. ಸಿಎಲ್‌ಸಿ–2** ಲೈಸನ್ಸ್ ಪ್ರತಿ **ನಿ.ಪಿ–7,** ದೂರುದಾರರ ದೂರಿನ ಪ್ರತಿಗಳು **ನಿ.ಪಿ–8** ರಂತೆ ಸಲ್ಲಿಸಿ ಗುರುತಿಸಿಕೊಂಡಿರುತ್ತಾರೆ.

18. ಪಿಡಬ್ಲ್ಯೂ–2 ಶ್ರೀ ಕೆ. ಸತ್ಯನಾರಾಯಣ, ಪೊಲೀಸ್ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ, ಚಿತ್ರದುರ್ಗ(ತನಿಖಾಧಿಕಾರಿಯವರು) ತಮ್ಮ ಮುಖ್ಯ ವಿಚಾರಣೆಯಲ್ಲಿ, ತನಗೆ ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಚಿತ್ರದುರ್ಗರವರು ಸದರಿ ದೂರನ್ನು ಕಳುಹಿಸಿ ತನಿಖೆ ಕೈಗೊಂಡು ವರದಿಯನ್ನು ಸಲ್ಲಿಸುವಂತೆ ಸೂಚಿಸಿದರ ಮೇರೆಗೆ ತಾನು ತನಿಖೆ ಕೈಗೊಂಡಿರುವುದಾಗಿ ನುಡಿದಿರುತ್ತಾರೆ.

19. ಪಿಡಬ್ಲ್ಯೂ-2 ತನಿಖಾಧಿಕಾರಿಯವರ ಮುಂದುವರೆದ ಮುಖ್ಯ ವಿಚಾರಣೆಯಲ್ಲಿ ವೈನ್ಸ್ ಅಂಗಡಿಗಳಲ್ಲಿ ಮದ್ಯ ಸೇವನೆಗೆ ಅವಕಾಶವಿರುವುದಿಲ್ಲ, ಆದಾಗ್ಯೂ ಕಾನೂನುಬಾಹಿರವಾಗಿ ವೈನ್ಸ್ ಅಂಗಡಿಗಳಲ್ಲಿ ಮದ್ಯ ಮಾರಾಟ ಸೇವನೆಯಾಗುತ್ತಿರುವುದಾಗಿಯೂ ಸಿ.ಎಲ್-2 ಲೈಸನ್ಸ್‌ದಾರರಿಂದ ಕರ್ನಾಟಕ ಅಬಕಾರಿ ಕಾಯ್ದೆ ಉಲ್ಲಂಘನೆಯಾಗಿರುತ್ತದೆಂದು ನುಡಿದಿರುತ್ತಾರೆ.

20. ಪಿಡಬ್ಲ್ಯೂ-2 ರವರು ಮುಂದುವರೆದ ವಿಚಾರಣೆಯಲ್ಲಿ, ಸಿ.ಎಲ್-9 ಲೈಸನ್ಸ್‌ದಾರರು ಬಾರ್ ಮತ್ತು ರೆಸ್ಟೋರೆಂಟ್‌ನ್ನು ಅಬಕಾರಿ ಇಲಾಖೆಯ ಷರತ್ತುಗಳ ಪ್ರಕಾರ ನಡೆಸುತ್ತಿರುವದಿಲ್ಲ, ಬಾರ್‌ಗಳನ್ನು ಬೆಳಿಗ್ಗೆ 10 ಗಂಟೆಗೆ ತೆರೆಯಬೇಕಾಗಿದ್ದು, ಅದಕ್ಕಿಂತ ಮುಂಚಿತವಾಗಿ ತೆರೆದಿರುವುದು ಕಂಡು ಬಂದಿರುತ್ತದೆಂದು ರಾತ್ರಿ 11-30 ಗಂಟೆಗೆ ಮುಚ್ಚಬೇಕಾಗಿದ್ದು, ರಾತ್ರಿ 12-30 ಗಂಟೆಯವರೆಗೆ ತೆರೆದಿರುವುದು ಕಂಡು ಬಂದಿದ್ದು ಅಬಕಾರಿ ಕಾಯ್ದೆ ಉಲ್ಲಂಘನೆಯಾಗಿರುತ್ತದೆಂದು ನುಡಿದಿರುತ್ತಾರೆ.

21. ಪಿಡಬ್ಲ್ಯೂ-2 ರವರ ಮುಂದುವರೆದ ಮುಖ್ಯ ವಿಚಾರಣೆಯಲ್ಲಿ, ಬಾರ್ ಮದ್ಯದ ಅಂಗಡಿಗಳಲ್ಲಿ ಎಂ.ಆರ್.ಪಿ ದರಕ್ಕಿಂತ ಹೆಚ್ಚಿಗೆ ಮಾರಾಟ ಮಾಡುತ್ತಿರುವುದು ಕಿರಾಣಿ ಅಂಗಡಿಗಳಲ್ಲಿ ರಾಜಾರೋಷವಾಗಿ ಮಧ್ಯವನ್ನು ಮಾರಾಟ ಮಾಡುತ್ತಿರುವುದು, ಮಧ್ಯದಂಗಡಿಗಳಲ್ಲಿ ರಶೀದಿಗಳನ್ನು ನೀಡದಿರುವುದು ಕಂಡು ಬಂದಿದ್ದು ಅಬಕಾರಿ ಕಾಯ್ದೆ ಉಲ್ಲಂಘನೆಯಾಗಿದ್ದರೂ ಆಪಾದಿತ ಸರ್ಕಾರಿ ನೌಕರರು ಯಾವುದೇ ಕ್ರಮವನ್ನು ಕೈಗೊಳ್ಳದೆ ಬೆರಳೆಣಿಕೆಯಷ್ಟು ಪ್ರಕರಣಗಳನ್ನು ಮಾತ್ರ ದಾಖಲಿಸಿರುವುದು ಕಂಡು ಬಂದಿರುವುದಾಗಿಯೂ ಇದರಲ್ಲಿ ಆಪಾದಿತ ಸರ್ಕಾರಿ ನೌಕರ ನಿರ್ಲಕ್ಷತೆ ಕಂಡು ಬರುವುದಾಗಿ ನುಡಿದಿರುತ್ತಾರೆ.

22. ಆ.ಸ.ನೌ ರವರು ಡಿ.ಡಬ್ಲ್ಯೂ-1 ಆಗಿ ತಮ್ಮ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಾಕ್ಷ್ಯ ಸಲ್ಲಿಸಿದ್ದು, ದೂರುದಾರರು ತನ್ನ ವಿರುದ್ಧ ಸುಳ್ಳು ದೂರು ದಾಖಲಿಸಿರುತ್ತಾರೆ, ತಮ್ಮ ವಿರುದ್ಧದ ಆಪಾದನೆಗಳನ್ನು ಅಲ್ಲಗಳೆದಿರುತ್ತಾರೆ, ತನ್ನ ವಿರುದ್ಧ ಚಿತ್ರದುರ್ಗ ನ್ಯಾಯಾಲಯದಲ್ಲಿ ಸ್ಪೇಷಲ್ ಕೇಸ್ ನಂ. 2/2016 ದಾಖಲಾಗಿದ್ದು ಮಾನ್ಯ ನ್ಯಾಯಾಲಯವು ನನ್ನನ್ನು ನಿರಾಪರಾಧಿಯೆಂದು ಬಿಡುಗಡೆ

ಮಾಡಿರುತ್ತಾರೆ ಹಾಗೂ ತನ್ನ ಪರವಾಗಿ ನಿ.ಡಿ–1 ರಿಂದ 4 ರ ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ.

23. ಪ್ರಾ.ಸಾ–1 ಮತ್ತು 2 ರವರುಗಳ ಹೇಳಿಕೆ ಹಾಗೂ ಡಿ.ಡಬ್ಲ್ಯೂ–1 ರವರ ಹೇಳಿಕೆ ಹಾಗೂ ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಿರುತ್ತೇನೆ. ದೂರುದಾರರು ಮತ್ತು ತನಿಖಾಧಿಕಾರಿಯವರು ನೀಡಿರುವ ಸಾಕ್ಷ್ಯವನ್ನು ಪರಿಶೀಲಿಸಲಾಗಿ, ಸಿ.ಎಲ್.–2 ಮದ್ಯದ ಅಂಗಡಿಗಳಲ್ಲಿ ಮದ್ಯ ಸೇವನೆಗೆ ಅವಕಾಶವಿಲ್ಲವಾದರೂ ಕಾನೂನು ಬಾಹಿರವಾಗಿ ಎಲ್ಲಾ ಮದ್ಯದ ಅಂಗಡಿಗಳಲ್ಲಿ ಮದ್ಯ ಸೇವನೆ ಮಾಡುತ್ತಿರುವುದು ಮತ್ತು ನಿಗದಿತ ಸಮಯಕ್ಕಿಂತ ಮಧ್ಯದಂಗಡಿಯವರು ಹೆಚ್ಚಿನ ಸಮಯ ಮಧ್ಯ ಮಾರಾಟ ಮಾಡುತ್ತಿರುವುದನ್ನು ಅಬಕಾರಿ ಇಲಾಖೆಯ ಅಧಿಕಾರಿಗಳು ತಡೆಗಟ್ಟಲು ಪರಿಣಾಮಕಾರಿಯಾದ ಕ್ರಮಗಳನ್ನು ತೆಗೆದುಕೊಳ್ಳದೆ, ಕೇವಲ ಅಂಕಿ ಸಂಖ್ಯೆಗೋಸ್ಕರ ಕೆಲವೊಂದು ಪ್ರಕರಣಗಳನ್ನು ಕರ್ನಾಟಕ ಅಬಕಾರಿ ಕಾಯ್ದೆ 1965 ಕಲಂ 36(ಬಿ) ಪ್ರಕಾರ ದಾಖಲಿಸಿರುವುದಾಗಿ ನುಡಿದಿರುತ್ತಾರೆ, ಆದರೆ ತನಿಖಾಧಿಕಾರಿಗಳು ಈ ಬಗ್ಗೆ ತನ್ನ ತನಿಖಾ ಕಾಲದಲ್ಲಿ ಯಾವ ಅಂಗಡಿಗೆ ಭೇಟಿ ಕೊಟ್ಟು ತನಿಖೆ ಮಾಡಿದ್ದಾಗಿ ಹಾಗೂ ಮದ್ಯದಂಗಡಿ ಮಾಲೀಕರನ್ನು ವಿಚಾರಣೇ ಮಾಡಿದ್ದಾಗಲೀ ಹಾಗೂ ಸ್ಥಳದಲ್ಲೇ ಹಾಜರಿದ್ದಂತಹ ಸಾಕ್ಷಿದಾರರ ಹೇಳಿಕೆ ದಾಖಲೆ ಮಾಡಿಕೊಂಡಿರುವುದಾಗಲೀ ಕಂಡು ಬರುವುದಿಲ್ಲ. ತನಿಖಾಧಿಕಾರಿಗಳು ತನಿಖೆ ಮಾಡಿದ ಬಗ್ಗೆ ಸ್ಥಳದಲ್ಲೆ ಯಾವುದೇ ಮಹಜರ್ ಕ್ರಮ ಜರುಗಿಸಿರುವುದು ಸಹಾ ಕಂಡು ಬರುವುದಿಲ್ಲ. ತನಿಖಾಧಿಕಾರಿಗಳ ತನಿಖಾ ವರದಿ ನಿ.ಪಿ–9 ನಿರ್ದಿಷ್ಟವಾಗಿರುವುದಿಲ್ಲ. ತನಿಖಾಧಿಕಾರಿಗಳ ಹೇಳಿಕೆಯಿಂದ ಮತ್ತು ನಿ.ಪಿ–9 ರ ವರದಿಯಿಂದ ಯಾವ ಸಿ.ಎಲ್–2 ಸನ್ನದ್ದದಾರರು ಅಬಕಾರಿ ಕಾಯ್ದೆ ಉಲ್ಲಂಘನೆ ಮಾಡಿ ಮದ್ಯದ ಅಂಗಡಿಗಳಲ್ಲಿ ಅವಧಿ ಮೀರಿ ಮದ್ಯ ಮಾರಾಟ ಮಾಡಿದರೆನ್ನುವ ಬಗ್ಗೆ ಹಾಗೂ ಸದರಿ ಸನ್ನದಿದಾರರು ಮಧ್ಯ ಸೇವಿಸಲು ಅನುವು ಮಾಡಿಕೊಟ್ಟ ಬಗ್ಗೆ ಯಾವುದೇ ಸಾಕ್ಷಿಗಳ ಮತ್ತು ಮಧ್ಯದ ಅಂಗಡಿಯ ಮಾರಾಟಗಾರರ ಹೇಳಿಕೆಗಳನ್ನು ಪಡೆದುಕೊಂಡಿರುವುದಿಲ್ಲ ಹಾಗೂ ಸ್ಥಳ ಮಹಜರ್ ಮಾಡಿರುವುದಿಲ್ಲ.

24. ಮದ್ಯದಂಗಡಿ ಮಾಲೀಕರು ಬಾಟಲ್ ಮೇಲಿರುವ ಎಂ.ಆರ್.ಪಿ. ದರಕ್ಕಿಂತ ಹೆಚ್ಚಿಗೆ ಮಾರಾಟ ಮಾಡಿರುವುದು ಹಾಗೂ ಮದ್ಯದ ಅಂಗಡಿಗಳಲ್ಲಿ ಮಾರಾಟ ಮಾಡುವ ಮದ್ಯಗಳಿಗೆ ರಸೀದಿ ನೀಡದೆ ಇರುವುದು ಹಾಗೂ ಪ್ರತಿ ಗ್ರಾಮಗಳಲ್ಲಿಯೂ ಸಹ ಅನಧಿಕೃತ ಮದ್ಯ ಮಾರಾಟ ಅವ್ಯಾಹತವಾಗಿ ನಡೆದಿದ್ದರೂ ಸಹ ಅಬಕಾರಿ ಅಧಿಕಾರಿಗಳು ಯಾವುದೇ ಕ್ರಮ ಜರುಗಿಸಿರುವುದಿಲ್ಲವೆಂದು ಆರೋಪಿಸಿದ್ದು, ಇದಕ್ಕೆ ಸಂಬಂಧಪಟ್ಟಂತೆ ತನಿಖಾಧಿಕಾರಿಗಳು ತಮ್ಮ ತನಿಖಾ ವರದಿ ನಿ.ಪಿ–9 ರಲ್ಲಿ ಯಾವ ಮದ್ಯದಂಗಡಿಯಲ್ಲಿ ಮದ್ಯದ ಬಾಟಲ್ ಮೇಲಿರುವ ಎಂ.ಆರ್.ಪಿ ದರಕ್ಕಿಂತ ಹೆಚ್ಚಿನ ದರದಲ್ಲಿ ಮಾರಾಟ ಮಾಡುತ್ತಿರುತ್ತಾರೆ ಹಾಗೂ ಮಾರಾಟ ಮಾಡಿದ ಮದ್ಯಗಳ ಬಾಟಲಿಗೆ ಸಂಬಂಧಪಟ್ಟಂತೆ ರಸೀತಿ ನೀಡಿರುವುದಿಲ್ಲ ಎಂಬ ಬಗ್ಗೆ ತನಿಖಾಧಿಕಾರಿಗಳು ತಮ್ಮ ತನಿಖಾ ವರದಿಯಲ್ಲಿ ನಿರ್ದಿಷ್ಟವಾಗಿ ಹೇಳಿರುವುದಿಲ್ಲ. ಈ ಬಗ್ಗೆ ಯಾವುದೇ ಮಹಜರ್ ಕ್ರಮ ಜರುಗಿಸಿರುವುದಿಲ್ಲ ಹಾಗೂ ತನಿಖಾಧಿಕಾರಿಗಳು ಈ ಬಗ್ಗೆ ದಾಖಲೆಗಳನ್ನು ಸಹ ಹಾಜರ್ ಪಡಿಸಿರುವುದಿಲ್ಲ.

25. ಆಪಾದಿತ ಸರ್ಕಾರಿ ನೌಕರರ ವಿರುದ್ಧ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿತ್ರದುರ್ಗ ಸ್ಪೇಷಲ್ ಕೇಸ್ ನಂ. 2/2016 ಅಬಕಾರಿ ಕಾಯ್ದೆಯಡಿಯಲ್ಲಿ ದಾಖಲಾಗಿದ್ದು ಮಾನ್ಯ ಜಿಲ್ಲಾ ಸತ್ರ ನ್ಯಾಯಾಲಯವು ವಿಚಾರಣೆ ಮಾಡಿ ಆ.ಸ.ನೌ ರವರನ್ನು ನಿರ್ದೋಷಿ ಎಂದು ಬಿಡುಗಡೆ ಮಾಡಿರುತ್ತದೆ.

ಮೇಲ್ಕಂಡ ಕಾರಣಗಳಿಂದ, ಆಪಾದಿತ ಸರ್ಕಾರಿ ನೌಕರರು, ಸಿ.ಎಲ್.–2 ಮದ್ಯದ ಅಂಗಡಿಗಳಲ್ಲಿ ಮದ್ಯ ಸೇವನೆಗೆ ಅವಕಾಶವಿಲ್ಲವಾದರೂ ಕಾನೂನು ಬಾಹಿರವಾಗಿ ಎಲ್ಲಾ ಮದ್ಯದ ಅಂಗಡಿಗಳಲ್ಲಿ ಮದ್ಯ ಸೇವನೆಗೆ ಅವಕಾಶ ನೀಡಿರುವುದು ಮತ್ತು ನಿಗದಿತ ಸಮಯಕ್ಕಿಂತ ಮದ್ಯದಂಗಡಿಯವರು ಹೆಚ್ಚಿನ ಸಮಯ ಮದ್ಯ ಮಾರಾಟ ಮಾಡುತ್ತಿದ್ದರೂ ಸೂಕ್ತ ಕ್ರಮಕೈಗೊಳ್ಳದಿರುವುದು, ಮದ್ಯದಂಗಡಿ ಮಾಲೀಕರು ಬಾಟಲ್ ಮೇಲಿರುವ ಎಂ.ಆರ್.ಪಿ. ದರಕ್ಕಿಂತ ಹೆಚ್ಚಿಗೆ ಮಾರಾಟ ಮಾಡಿ ಮಾರಾಟ ಮಾಡುವ ಮದ್ಯಗಳಿಗೆ ರಸೀದಿ ನೀಡದೆ ಇರುವುದು ಹಾಗೂ ಪ್ರತಿ ಗ್ರಾಮಗಳಲ್ಲಿಯೂ ಸಹ ಅನಧಿಕೃತ ಮದ್ಯ ಮಾರಾಟ ಅವ್ಯಾಹತವಾಗಿ ನಡೆದಿದ್ದರೂ ಸಹ

ಇದನ್ನು ತಡೆಗಟ್ಟಲು ಪರಿಣಾಮಕಾರಿಯಾದ ಕ್ರಮಗಳನ್ನು ತೆಗೆದುಕೊಳ್ಳದೆ ಕರ್ನಾಟಕ ಸರ್ಕಾರಿ ಸೇವಾ (ನಡತೆ) ನಿಯಮಾವಳಿ 1966ರ ನಿಯಮ (3)(1)ನೇ ನಿಬಂಧನೆಯನ್ನು ಉಲ್ಲಂಘಿಸಿ ದುರ್ನಡತೆ ಎಸಗಿರುವುದನ್ನು ಸಕ್ಷಮ ಪ್ರಾಧಿಕಾರವು ಸಾಬೀತುಗೊಳಿಸಲು **ವಿಫಲವಾಗಿರುತ್ತದೆ.**

**ಅಂಶ–2: ಈ ಮೇಲ್ಕಂಡ ಕಾರಣಗಳಿಗಾಗಿ ಈ ಕೆಳಕಂಡಂತೆ ವಿಚಾರಣಾ ವರದಿ ಸಲ್ಲಿಸಲಾಗಿದೆ.**

**: ವಿಚಾರಣಾ ವರದಿ :**

ಶಿಸ್ತು ಪ್ರಾಧಿಕಾರದವು ಆ.ಸ.ನೌ ಶ್ರೀ ಎನ್. **ರಾಮಚಂದ್ರಯ್ಯ,** (ನಿವೃತ್ತ) **ಹಿಂದಿನ ಅಬಕಾರಿ ಉಪ ಆಯುಕ್ತರು, ಚಿತ್ರದುರ್ಗ** ರವರ ವಿರುದ್ಧ ದೋಷಾರೋಪಣೆಯಲ್ಲಿ ಮಾಡಲಾದ 2(i) ರಿಂದ (iii) ರವರೆಗಿನ ಆಪಾದನೆಗಳನ್ನು ರುಜುವಾತು ಪಡಿಸುವಲ್ಲಿ ವಿಫಲವಾಗಿರುತ್ತದೆ.

ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತ–2 ರವರಿಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆ ಕಛೇರಿಗೆ ಆದೇಶಿಸಲಾಗಿದೆ.

**29ನೇ ಅಕ್ಟೋಬರ್ 2021**

(ಜಿ. ನಂಜುಂಡಯ್ಯ)
ಅಪರ ನಿಬಂಧಕರು ವಿಚಾರಣೆಗಳು–10,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

| | |
|---|---|
| **LIST OF WITNESS EXAMINED ON BEHALF OF DISCIPLINARY AUTHORITY :** | |
| PW-1 : Sri. Naveen Kumar (Complainant) (original) | |
| PW-2 : Sri. Satyanarayana, Police Inspector, Karnataka Lokayukta, Chitradurga (Investigation Officer) (original) | |
| **LIST OF WITNESS EXAMINED ON BEHALF OF DEFENSE :** | |
| DW-1 : Sri. N. Ramachandraiah (DGO)-(original) | |
| **LIST OF EXHIBITS MARKED ON BEHALF OF DISCIPLINARY AUTHORITY:** | |
| Ex.P.1 : | Complaint of the complainant dated 02.05.2015 (original) |
| Ex.P.2 : | Form No.I dated 02/05/2015 - (original) |
| Ex.P.3 : | Form No. II (Affidavit) dated 02/05/2015 (original) |
| Ex.P.4 : | Xerox copies of complaint addressed to DGO, Joint Commissioner, Excise Inspector (xerox) |
| Ex.P.5 : | Rejoinder to the comments of DGO dated 22/03/2017 (Original) |
| Ex.P.6 : | 2 photos of Venkateshwara wines and Manjula Enter prises (xerox) |
| Ex.P.7 : | Xerox copy of CL-2 license (Xerox) |
| Ex.P.8 : | Xerox copies of complaints dated 28/03/2015 (Xerox) |

| | |
|---|---|
| Ex.P.9 | Investigation Rcport of I.O. dated 09/12/2015 (Original) |
| Ex.P.10: | Forwardal of I.O. report by the Supdt. Of Police, Lokayukta, Chitradurga to DRE-5, Lokayukta, Bengaluru dated 09/12/2015 (Original) |
| **LIST OF EXHIBITS MARKED ON BEHALF OF DEFENSE:** | |
| Ex.D-1 : | Comments of DGO dated 07/09/2016 ( Xerox) |
| Ex.D-2 : | Copies of FIR and disposed of orders and fine amount paid to Government and challans. (Certified Xerox copies ) |
| Ex.D-3 : | Government Order No. ಎಫ‌ಡಿ/42/ಎಪಿಎಸ್/2007(1), ಬೆಂಗಳೂರು ದಿನಾಂಕ 24.03.2008 regarding duties and responsibilities of the Excise Officers (Certified Xerox Copies ) |
| Ex.D-4 : | Copy of the judgment in Special Case No. 02/2016 (Xerox) |

Receipt of the above report and original records may kindly be acknowledged.

Date of Retirement of DGO is **31.05.2015 (Already Retired).**

**(G. NANJUNDAIAH)**
Additional Registrar (Enquiries)-10
Karnataka Lokayukta,
Bengaluru.

KARNATAKA LOKAYUKTA

No.UPLOK-2/DE.815/2017/ARE-10

Multi Storied Building,
Dr. B.R. Ambedkar Veedhi,
Bengaluru-560 001.
Dated 04.11.2021.

RECOMMENDATION

Sub:- Departmental inquiry against Sri N.Ramachandraiah, (Retired) the then Deputy Commissioner of Excise, Chitradurga- reg.

Ref:- 1) Government Order No. FD 59 EPS 2017 dt.13.06.2017.

2) Nomination order No. UPLOK-2/DE.815/2017 dated 24.06.2017 of Upalokayukta, State of Karnataka.

3) Inquiry report dated 29.10.2021 of Additional Registrar of Enquiries-10, Karnataka Lokayukta, Bengaluru.

~~~~~

The Government by its orders dated 13.06.2017 initiated the disciplinary proceedings against Sri N.Ramachandraiah, (Retired) the then Deputy Commissioner of Excise, Chitradurga, [hereinafter referred to as Delinquent Government Official, for short as 'DGO' ] and entrusted the departmental inquiry to this Institution.
~~~~~

2. This Institution by Nomination Order No. UPLOK-2/DE.815/2017 dated 24.06.2017 nominated Additional Registrar of Enquiries-10, Karnataka Lokayukta, Bengaluru, as the Inquiry Officer to frame charges and to conduct departmental inquiry against DGO for the alleged charge of misconduct, said to have been committed by him.

3. The DGO was tried for the charge that he failed to take proper action against the license holders who were selling liquor by violating the conditions of license and the guidelines issued from time to time and in some cases, registered only few cases just for the purpose of statistics and thereby committed misconduct.

4. The Inquiry Officer (Additional Registrar of Enquiries-10) on proper appreciation of oral and documentary evidence has held that, the above charge against the DGO Sri N.Ramachandraiah, (Retired) the then Deputy Commissioner of Excise, Chitradurga, is ' not proved'.

5. On re-consideration of report of inquiry and all other materials on record, I do not find any reason to interfere with the findings recorded by the Inquiry Officer. Therefore, it is hereby recommended to the Government to accept the report of Inquiry Officer and exonerate DGO Sri N.Ramachandraiah, (Retired) the then Deputy Commissioner of Excise, Chitradurga, of the charges leveled against him.

6. Action taken in the matter shall be intimated to this Authority.

Connected records are enclosed herewith.

4/11/21

**(JUSTICE B.S.PATIL)**
**Upalokayukta,**
**State of Karnataka.**

*BS**